**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 1001 (1203) |
| ಸದಸ್ಯರ ಹೆಸರು | : | ಶ್ರೀ ಎಫ್.ಹೆಚ್.ಜಕಪ್ಪನವರ್ (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | : | 27.08.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು. |

| | **ಪ್ರಶ್ನೆ** | **ಉತ್ತರ** |
|---|---|---|
| ಅ) | ತುಮಕೂರು ಮಹಾನಗರ ಪಾಲಿಕೆ ಅಧೀನದಲ್ಲಿರುವ ಉದ್ಯಾನವನಗಳು ಹಾಗೂ ರಸ್ತೆ ವಿಭಜಕಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಕಾಮಗಾರಿಗಳು ಎಷ್ಟು; (ವಿವರ ಒದಗಿಸುವುದು) | ತುಮಕೂರು ಮಹಾನಗರ ಪಾಲಿಕೆಯಲ್ಲಿ 2024-25ನೇ ಸಾಲಿನವರೆವಿಗೂ ಹೊರಗುತ್ತಿಗೆಯಡಿ ಗಾರ್ಡನರ್ಸ್ ಸರಬರಾಜು ಪಡೆದು ಉದ್ಯಾನವನಗಳ & ರಸ್ತೆ ವಿಭಜಕಗಳ ನಿರ್ವಹಣೆಯನ್ನು ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿತ್ತು.<br>ಪ್ರಸ್ತುತ 2025-26 ನೇ ಸಾಲಿನಲ್ಲಿ ಅಮೃತ ಮಿತ್ರ 2.0 ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘದ ವತಿಯಿಂದ ಒಟ್ಟು 80 ಉದ್ಯಾನವನಗಳನ್ನು ನಿರ್ವಹಣೆಗೆ ನೀಡಲಾಗಿದೆ ಹಾಗೂ ತೋಟಗಾರಿಕೆ ಇಲಾಖೆಯ ಎಸ್.ಆರ್ ದರ ಪಟ್ಟಿಯಂತೆ 110 ಉದ್ಯಾನವನಗಳ ನಿರ್ವಹಣೆಗೆ ಟೆಂಡರ್ ಮೂಲಕ ನೀಡಲಾಗಿರುತ್ತದೆ.<br>ಪಾಲಿಕೆ ವತಿಯಿಂದ 2025-26ನೇ ಸಾಲಿನಲ್ಲಿ ಅಶೋಕ ರಸ್ತೆ, ಶಿರಾ ಮುಖ್ಯ ರಸ್ತೆ ಹಾಗೂ ಜೆ.ಸಿ ರಸ್ತೆಯ ವಿಭಜಕಗಳನ್ನು ಅಭಿವೃದ್ಧಿಪಡಿಸಿ 2 ವರ್ಷ ನಿರ್ವಹಣೆ ಕಾಮಗಾರಿಗೆ ಟೆಂಡರ್ ನೀಡಲಾಗಿದೆ.<br>ಪಾಲಿಕೆ ವತಿಯಿಂದ ಮೂರು ವರ್ಷಗಳಲ್ಲಿ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳು-17, ಉದ್ಯಾನವನಗಳ ನಿರ್ವಹಣೆಗೆ-05 ಕಾಮಗಾರಿಗಳು, ರಸ್ತೆ ವಿಭಜಕಗಳ 02 ಅಭಿವೃದ್ಧಿ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ನಿರ್ವಹಿಸಲಾಗಿರುತ್ತದೆ ಹಾಗೂ ಅಮೃತ್ ಮಿತ್ರ ಯೋಜನೆಯಡಿ-08 ಕಾಮಗಾರಿಗಳನ್ನು ಟೆಂಡರ್ ಆಹ್ವಾನಿಸಿ ನಿರ್ವಹಿಸಲಾಗುತ್ತಿದೆ. |
| ಆ) | ಕೈಗೊಂಡಿರುವ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ನಿಯಮಾನುಸಾರ ಕಾಮಗಾರಿಗಳನ್ನು ಮೀಸಲಿರಿಸಲಾಗಿದೆಯೇ? (ಮಾಹಿತಿ ಒದಗಿಸುವುದು ) | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕತೆ ಕಾಯ್ದೆ-1999 (ಕೆಟಿಪಿಪಿ) ನಿಯಮಾವಳಿಗಳಂತೆ ಟೆಂಡರ್ ಕರೆಯಲಾಗಿರುತ್ತದೆ. |
| ಇ) | ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಉದ್ಯಾನವನಗಳು ಹಾಗೂ ರಸ್ತೆ ವಿಭಜಕಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ನಿಗಧಿಪಡಿಸಿದ ಅನುದಾನ ಮತ್ತು ಖರ್ಚಿನ ವಿವರ ಒದಗಿಸುವುದು. | ಕಳೆದ ಮೂರು ವರ್ಷಗಳಿಂದ ಉದ್ಯಾನವನಗಳು ಹಾಗೂ ರಸ್ತೆ ವಿಭಜಕಗಳ ನಿರ್ವಹಣೆ ಹಾಗೂ ಅಭಿವೃದ್ಧಿಗೆ ರೂ.318.29 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.<br><br>ತುಮಕೂರು ಮಹಾನಗರ ಪಾಲಿಕೆಗೆ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ-2.0ರ ಅಡಿ ರೂ. 13.40 ಕೋಟಿಗಳು ಹಾಗೂ ಅಮೃತ್-2.0ರ ಅನುದಾನದಲ್ಲಿ ರೂ.5.00 ಕೋಟಿಗಳಿಗೆ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |

| | | |
|---|---|---|
| ಈ) | ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳನ್ನು ಕೊಟೇಶನ್ ಮೂಲಕ ಮತ್ತು ಟೆಂಡರ್ ಮೂಲಕ ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಕಳೆದ ಮೂರು ವರ್ಷಗಳಿಂದ ಉದ್ಯಾನವನಗಳ ನಿರ್ವಹಣೆ ಹಾಗೂ ರಸ್ತೆ ವಿಭಜಕಗಳ ಅಭಿವೃದ್ಧಿ ಯಾವುದೇ ಕಾಮಗಾರಿಗಳನ್ನು ಕೊಟೇಷನ್ ಮುಖಾಂತರ ನಿರ್ವಹಿಸಿರುವುದಿಲ್ಲ ಹಾಗೂ ಪಾಲಿಕೆ ವತಿಯಿಂದ ಮೂರು ವರ್ಷಗಳಲ್ಲಿ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳು-17, ಉದ್ಯಾನವನಗಳ ನಿರ್ವಹಣೆಗೆ-5 ಕಾಮಗಾರಿಗಳು, ರಸ್ತೆ ವಿಭಜಕಗಳ ಅಭಿವೃದ್ಧಿಯ 02 ಕಾಮಗಾರಿಗಳನ್ನು ಟೆಂಡರ್ ಮುಖಾಂತರ ನಿರ್ವಹಿಸಲಾಗಿರುತ್ತದೆ ಹಾಗೂ ಅಮೃತ್ ಮಿತ್ರ ಯೋಜನೆಯಡಿ-8 ಕಾಮಗಾರಿಗಳನ್ನು ಟೆಂಡರ್ ಆಹ್ವಾನಿಸಿ ನಿರ್ವಹಿಸಲಾಗುತ್ತಿದೆ. |

**ಸಂಖ್ಯೆ: ನಅಇ 105 ತುಮಹಾ 2026 (ಇ)**

(ಸಹಿ)

**(ಡಾ.ಯತೀಂದ್ರ ಸಿದ್ಧರಾಮಯ್ಯ)**

ನಗರಾಭಿವೃದ್ಧಿ ಸಚಿವರು